**ಶ್ರೀ ಡಿ.ಎಸ್. ಅರುಣ್, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

**ವಿಷಯ:-** ನಮ್ಮ ರಾಜ್ಯದ ಕೃಷಿ ಇಲಾಖೆಯಲ್ಲಿ ಹಲವು ವರ್ಷಗಳಿಂದ ಮುಂದುವರೆಯುತ್ತಿರುವ ಸಿಬ್ಬಂದಿ ಕೊರತೆ ಈಗ ಗಂಭೀರ ಹಂತಕ್ಕೆ ತಲುಪಿದೆ. ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಕೃಷಿ ಕಚೇರಿಗಳಲ್ಲಿ ಅಗತ್ಯವಿರುವ ತಾಂತ್ರಿಕ ಸಿಬ್ಬಂದಿ, ಕೃಷಿ ಸಹಾಯಕರು ಮತ್ತು ಕೃಷಿ ವಿಜ್ಞಾನಿಗಳ ಹುದ್ದೆಗಳು ದೊಡ್ಡ ಸಂಖ್ಯೆಯಲ್ಲಿ ಖಾಲಿ ಇರುವುದರಿಂದ, ರೈತರಿಗೆ ತಲುಪಬೇಕಾದ ಮೂಲಭೂತ ಸೇವೆಗಳು ವಿಳಂಬವಾಗುತ್ತಿವೆ.

ಕೃಷಿ ಮಾರ್ಗದರ್ಶನ, ಬೆಳೆ ಪರಿಶೀಲನೆ, ಯೋಜನೆಗಳ ಪ್ರಚಾರ, ಸಬ್ಸಿಡಿ ಪರಿಶೀಲನೆ ಮುಂತಾದ ಕೆಲಸಗಳು ಸಿಬ್ಬಂದಿ ಕೊರತೆಯಿಂದ ಸರಿಯಾದ ಸಮಯಕ್ಕೆ ನಡೆಯದೆ ಹಲವೆಡೆ ರೈತರು ತೊಂದರೆ ಅನುಭವಿಸುತ್ತಿದ್ದಾರೆ. PM KISAN, ಸಬ್ಸಿಡಿ ಬಿಡುಗಡೆ, ಬೆಳೆ ಹಾನಿ ಪರಿಶೀಲನೆ ಸೇರಿದಂತೆ ಹಲವು ಸರ್ಕಾರದ ಯೋಜನೆಗಳ ಜಾರಿಗೆ ಪರಿಣಾಮಕಾರಿ ಸೇವೆ ದೊರೆಯದೇ ವಿಳಂಬಗಳು ಹೆಚ್ಚುತ್ತಿರುವುದು ಗಮನಾರ್ಹವಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ರೈತರಿಗೆ ತಕ್ಷಣದ ತಾಂತ್ರಿಕ ಸಲಹೆ ಸಿಗದೆ ಬೆಳೆ ನಷ್ಟ ಮತ್ತು ಆರ್ಥಿಕ ಹಾನಿ ಎದುರಾಗುತ್ತಿರುವುದು ಮತ್ತೊಂದೆಡೆ ಚಿಂತಾಜನಕವಾಗಿದೆ. ಈ ಸಿಬ್ಬಂದಿ ಕೊರತೆಯಿಂದ ಕೃಷಿ ಇಲಾಖೆಯ ದೈನಂದಿನ ಕಾರ್ಯನಿರ್ವಹಣೆ ಕುಂಠಿತವಾಗಿದ್ದು ರೈತರ ಅಸಮಾಧಾನ ಹೆಚ್ಚುತ್ತಿದೆ.

ರಾಜ್ಯದ ರೈತರ ಹಿತಾಸಕ್ತಿ, ಕೃಷಿ ಇಲಾಖೆಯ ಸುಗಮ ಕಾರ್ಯ ನಿರ್ವಹಣೆ ಹಾಗೂ ಸರ್ಕಾರದ ಯೋಜನೆಗಳು ತಲುಪಬೇಕಾದ ಅಗತ್ಯದ ಹಿನ್ನೆಲೆಯಲ್ಲಿ ಕೃಷಿ ಇಲಾಖೆಯ ಸಿಬ್ಬಂದಿ ಕೊರತೆಗೆ ತ್ವರಿತವಾಗಿ ಪರಿಹಾರ ಕಂಡುಕೊಳ್ಳಬೇಕಾದುದು ಮುಖ್ಯ ವಿಷಯವಾಗಿದೆ.

ರೈತರ ಜೀವನೋಪಾದಿ ಮತ್ತು ಕೃಷಿ ಅಭಿವೃದ್ಧಿಗೆ ಸಹಾಯಕವಾಗಿರುವ ಈ ಇಲಾಖೆಯ ವಿವಿಧ ಹುದ್ದೆಗಳ ಭರ್ತಿಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಕೃಷಿ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:-**

ಕೃಷಿ ಇಲಾಖೆಯಲ್ಲಿ 4717 ತಾಂತ್ರಿಕ ಹುದ್ದೆಗಳು ಮಂಜೂರಾಗಿದ್ದು 1709 ಹುದ್ದೆಗಳು ಮಾತ್ರ ಭರ್ತಿಯಾಗಿರುತ್ತವೆ (ಶೇ 36.23ರಷ್ಟು) ಕ್ಷೇತ್ರ ಮಟ್ಟದಲ್ಲಿ ಅಂದರೆ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ಮಂಜೂರಾಗಿರುವ 3900(1801+2099) ಹುದ್ದೆಗಳಲ್ಲಿ 1124(1057+67) (ಶೇ 28.8ರಷ್ಟು) ಭರ್ತಿಯಾಗಿರುತ್ತವೆ.

ಖಾಲಿ ಹುದ್ದೆಗಳ ಪೈಕಿ 945(ಕೃಷಿ ಅಧಿಕಾರಿ 128+ಸಹಾಯಕ ಕೃಷಿ ಅಧಿಕಾರಿ 817) ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗದಿಂದ ದಿನಾಂಕ 20.09.2024 ರಂದು ನೇಮಕಾತಿ ಅಧಿಸೂಚನೆ ಹೊರಡಿಸಲಾಗಿತ್ತು. ಸರ್ಕಾರದ ಸುತ್ತೋಲೆ ದಿನಾಂಕ 04.09.2025 ರನ್ವಯ ಪರಿಶಿಷ್ಟ ಜಾತಿ ಒಳ ಮೀಸಲಾತಿ ಅಳವಡಿಸಿಕೊಂಡು ನೇಮಕಾತಿ ಪ್ರಕ್ರಿಯೆ ಮುಂದುವರೆಸಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ:19.11.2025 ಸದರಿ

ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನು ರದ್ದುಪಡಿಸಿರುತ್ತದೆ. ಪ್ರಸ್ತುತ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸುವ ಹಂತದಲ್ಲಿರುತ್ತದೆ. ಈ ಮಧ್ಯೆ ಮಾನ್ಯ ಉಚ್ಚ ನ್ಯಾಯಾಲಯವು WP NO 200448/2025, ದಿನಾಂಕ 27.11.2025 ರ ಆದೇಶದಲ್ಲಿ ಮುಂದಿನ ಆದೇಶದವರೆಗೆ ಹೊಸ ನೇರ ನೇಮಕಾತಿ ಅಧಿಸೂಚನೆ ಹೊರಡಿಸದಿರಲು ನಿರ್ದೇಶಿಸಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ ಮುಂದಿನ ನಿರ್ದೇಶನದನ್ವಯ ನೇಮಕಾತಿ ಪ್ರಕ್ರಿಯೆ ಮುಂದುವರೆಸಿ ಖಾಲಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲಾಗುವುದು.

ಉಳಿದಂತೆ 1433(ಸಹಾಯಕ ಕೃಷಿ ಅಧಿಕಾರಿ 1195 + ಕೃಷಿ ಅಧಿಕಾರಿ 238) ನೇರ ನೇಮಕಾತಿ ಕೋಟಾದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಮುಂಬಡ್ತಿ ಕೋಟಾದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.

ಕೃಷಿ ಸಹಾಯಕ ಹುದ್ದೆಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮ 2021 ರಲ್ಲಿ ನಶಿಸಿ ಹೋಗುವ ಹುದ್ದೆಗಳೆಂದು ಆದೇಶಿಸಲಾಗಿದೆ. ಪ್ರಸ್ತುತ 03 ಜನ ಕೃಷಿ ಸಹಾಯಕರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಕೃಷಿ ಸಹಾಯಕ 5965 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಪರಿಶೀಲನಾ ಹಂತದಲ್ಲಿರುತ್ತದೆ.

ಕೃಷಿ ಇಲಾಖೆಯ ಯೋಜನೆಗಳಾದ ಬಿತ್ತನೆ ಬೀಜ ವಿತರಣೆ/ಬೆಳೆ ಸಮೀಕ್ಷೆ, ಬೆಳೆ ವಿಮೆ, ಸಸ್ಯ ಸಂರಕ್ಷಣೆ, ಆಹಾರ ಭದ್ರತಾ ಯೋಜನೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಮಣ್ಣು ಆರೋಗ್ಯ ಚೀಟಿ ವಿತರಣೆ, PM KISAN ಯೋಜನೆ, ಗುಣ ನಿಯಂತ್ರಣ, ಕೃಷಿ ಯಂತ್ರೋಪಕರಣ ಯೋಜನೆ, ಸೂಕ್ಷ್ಮ ನೀರಾವರಿ, ಆತ್ಮ ಯೋಜನೆ, ಕೃಷಿ ಭಾಗ್ಯ ಯೋಜನೆ, ಜಲಾನಯನ ಅಭಿವೃದ್ಧಿ ಯೋಜನೆಗಳು, ಅಟಲ್ ಭೂಜಲ ಯೋಜನೆ, ಕೃಷಿ ಸಂಜೀವಿನಿ ಯೋಜನೆ/ರೈತರಿಗೆ ತರಬೇತಿ ಕಾರ್ಯಕ್ರಮಗಳು ಹಾಗೂ ಸಲಹೆ ಸೂಚನೆ ಮುಂತಾದ ಕಾರ್ಯಕ್ರಮಗಳನ್ನು ಸಿಬ್ಬಂದಿ ಕೊರತೆ ಇರುವ ಕ್ಷೇತ್ರ/ಗ್ರಾಮೀಣ ಪ್ರದೇಶಗಳಲ್ಲಿ ರೈತರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಅಗತ್ಯತೆಗೆ ಅನುಗುಣವಾಗಿ ಆತ್ಮ ಯೋಜನೆಯಡಿ(ATMA) ಗುತ್ತಿಗೆ ಮೇರೆಗೆ ತಾಂತ್ರಿಕ ಸಿಬ್ಬಂದಿಗಳಾದ ಸಹಾಯಕ ತಾಂತ್ರಿಕ ವ್ಯವಸ್ಥಾಪಕರು ಮತ್ತು ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಬಳಸಿಕೊಂಡು ಸಿಬ್ಬಂದಿ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗಿದೆ.

ಸಂಖ್ಯೆ:AGRI/478/AGS/2025

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು.